<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>Spl.C.150/2023</u>

ದಿಃ 16.11.2024
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-8 Pw-8

| | | |
|---|---|---|
| ಹೆಸರು | ಃ | ಎಸ್ ಆರ್ ಕವಡಿಮಠಿ |
| ತಂದೆಯ ಹೆಸರು | ಃ | ರಾಮಣ್ಣಗೌಡ |
| ವಯಸ್ಸು | ಃ | 36 ವರ್ಷ |
| ಉದ್ಯೋಗ | ಃ | ಹೆಚ್.ಸಿ.ನಂಬರ್.520, ಕನಕಪುರ ಗ್ರಾಮೀಣ ಪೊಲೀಸ್ ಠಾಣೆ |
| ವಾಸಸ್ಥಳ | ಃ | ಕನಕಪುರ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ನಾನು ಕಳೆದ 2 ವರ್ಷಗಳಿಂದ ಕನಕಪುರದ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಹೆಚ್.ಸಿ.ನಂಬರ್.520 ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ22.08.2023 ರಂದು ಪ್ರಸ್ತುತ ಪ್ರಕರಣದಲ್ಲಿ ಆರೋಪಿತನು ಉಪಯೋಗಿಸಿದ್ದ ದ್ವಿಚಕ್ರ ವಾಹನ ಸಂಖ್ಯೆ. ಕೆಎ-42,ಇಇ-9268 ನ್ನು ತಂದು ಹಾಜರುಪಡಿಸಲು ನನ್ನನ್ನು ನಿಯೋಜಿಸಿರುವ ಕಾರಣ, ಅದೇ ದಿನ ವಾಡೆದೊಡ್ಡಿಯಲ್ಲಿರುವ ಆರೋಪಿತನ ಮನೆಯ ಮುಂದೆ ನಿಲ್ಲಿಸಿದ್ದ ಸದರಿ ದ್ವಿಚಕ್ರ ವಾಹನವನ್ನು ನಾನು ತಂದು ಚಾಸಾ.13 ಇವರ ಮುಂದೆ ಒಂದು ವರದಿಯೊಂದಿಗೆ ಹಾಜರುಪಡಿಸಿರುತ್ತೇನೆ.

3. ಸದರಿ ವರದಿಯನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ, ಅದನ್ನು ನಿ.ಪಿ.7 ಎಂದು, ಮತ್ತು ಅದರ ಮೇಲಿರುವ ನನ್ನ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು.

4. ಸದರಿ ದ್ವಿಚಕ್ರ ವಾಹನಕ್ಕೆ ಸಂಬಂಧಿಸಿದ 3 ವರ್ಣರಂಜಿತ ಛಾಯಾಚಿತ್ರಗಳನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ, ಅವುಗಳನ್ನು ಕ್ರಮವಾಗಿ ನಿ.ಪಿ.8ರಿಂದ 10 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ. ಡಿ.ಆರ್.ಜೆ., ವಕೀಲರಿಂದ ಆರೋಪಿಯ ಪರವಾಗಿಃ ಆರೋಪಿ ಪರ ವಕೀಲರು ಕೂಗಿಸಲಾಯಿತು. ಗೈರು ಹಾಜರಿರುತ್ತಾರೆ. ಯಾವುದೇ ಸಕಾರಣವಿಲ್ಲದ್ದರಿಂದ ಮತ್ತು ವಿನೋದ್ ಕುಮಾರ್ ವರ್ಸಸ್ ಸ್ಟೇಟ್ ಆಫ್ ಪಂಜಾಬ್ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯ ವಿಚಾರಣೆ ಮತ್ತು ಪಾಟೀ ಸವಾಲುಗಳನ್ನು ಒಂದೇ ದಿನದಂದು ಮಾಡಬೇಕೆಂದು ನಿರ್ದೇಶನವಿರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.